ಶ್ರೀ ಕೊಂಡಜ್ಜಿ ಬಸಪ್ಪ.—ಈ ಸೊಸೈಟಿಯಲ್ಲಿ ಯಾವ ಹಣವೂ ದುರುಪಯೋಗವಾಗದಿರುವ ಕಾರಣ ಅವರ ಬಗ್ಗೆ ಇಲಾಖೆಯ ಎನ್‌ಕ್ವೈರಿಯೇ ಸಾಕಷ್ಟು ಪರಿಣಾಮವನ್ನು ಉಂಟುಮಾಡುವುದಾಗಿ ತಿಳಿದುಬಂದ ಕಾರಣ ಅದನ್ನು ವಿತ್‌ಡ್ರಾ ಮಾಡುವುದಕ್ಕೆ ತಿಳಿಸಲಾಗಿದೆ.

ಶ್ರೀ ಜಿ. ಎ. ಗೌಡ.—ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಿಗೆ ಹೀಗೆ ಪ್ರಾಸಿಕ್ಯೂಷನ್ ಮಾಡತಕ್ಕ ಕೇಸಲ್ಲ ಇದು ಎಂಬುದು ಅವರಿಗೆ ಏಕೆ ಗೊತ್ತಾಗಲಿಲ್ಲ ?

Sri KONDAJJI BASAPPA.—Since no part of the funds of the society has been used for this purpose and ends of justice would be meted out by holding a departmental enquiry instead of prosecuting him in a Court, it has been done so.

Sri K. LAKKAPPA.—What is the action taken against him by now?

Sri KONDAJJI BASAPPA.—We are not able to secure departmental records yet as the records are still with the Police.

Sri S. RAJAGOPAL.—When the Government instructed the Assistant Registrar to withdraw the case by the Police ?

Sri KONDAJJI BASAPPA. It was in the year 1961.

Mr. SPEAKER.—I put Question No. 500.

Minor Irrigation Works in Arkalgud Taluk.

*Q.—500. Sri G. A. THIMMAPPA GOWDA (Arkalgud).—

Will the Government be pleased to state :—

(*a*) when the minor irrigation investigation division was started in Hassan District ;

(*b*) the number of minor irrigation works investigated, sanctioned and executed in each Hobli of Arkalgud Taluk, Hassan District for the last two years ;

(*c*) the estimated cost of each of these works together with the date of investigation, date of sanction and execution ?

A.—Sri ALUR HANUMANTHAPPA (Deputy Minister for Minor Irrigation).—

(*a*) No Minor Irrigation Investigation Division was started in Hassan District. However an Investigation Sub-division was started in 1959.

(*b*) 1963—64 ... 55 Works.
1964—65 ... 20 Works.

(*c*) *Vide* statement placed on the Table of the House.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಅಲ್ಲಿ ಈ ಮೈನರ್ ಇರಿಗೇಷನ್ ಡಿವಿಜನ್ ಪ್ರಾರಂಭವಾದ ನಂತರ ಇಲ್ಲಿಯವರೆಗೆ ಎಷ್ಟು ಅಂದಾಜುಗಳನ್ನು ಮಾಡಲಾಯಿತು. ಅವುಗಳಲ್ಲಿ ಮಂಜೂರಾದವುಗಳೆಷ್ಟು ?

† ಶ್ರೀ ಆಲೂರು ಹನುಮಂತಪ್ಪ.—ಅಲ್ಲಿ ಆ ಸಿಬ್‌ಡಿವಿಜ್ ಪ್ರಾರಂಭವಾದದ್ದು 1959 ರಲ್ಲಿ. ಆ ವಿಚಾರ ತಮಗೆ ಬೇಕಾಗಿದ್ದರೆ ತಾವು ಅಲಾಯಿದೆ ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಉತ್ತರವನ್ನು ಒಗಿಸಲಾಗುವುದು. ಈಗ ಇಲ್ಲಿ ಏನು ಪ್ರಶ್ನೆಯನ್ನ ಕೇಳಿತ್ತೋ ಅದಕ್ಕೆ ಸಂಬಂಧಪಟ್ಟಿದನ್ನು ತಿಳಿಸಲಾಗಿದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಹೋಗಲಿ, ಇದುವರೆಗೂ ಅಲ್ಲಿ ಖರ್ಚು ಮಾಡಿರತಕ್ಕ ಹಣವೆಷ್ಟು ಎಂಬುದನ್ನಾದರೂ ತಿಳಿಸುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅದಕ್ಕೂ ಸಹಾ ಬೇರೆ ಪ್ರಶ್ನೆಯನ್ನು ಕಳುಹಿಸಬೇಕು. ತಾವು ಕೇಳತಕ್ಕ ಉಪ ಪ್ರಶ್ನೆ ಇದರಿಂದ ಉದ್ಭವಿಸುವುದಿಲ್ಲ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಹೀಗಾದರೆ ನಾವೇನು ಪ್ರಶ್ನೆಗಳನ್ನು ಕೇಳುವುದು ?

ಶ್ರೀ ಕೆ ಲಕ್ಕಪ್ಪ.—ಇಲ್ಲಿ 1964—65ನೇ ಸಾಲಿಗೆ ಕೇಳಿರತಕ್ಕ 20 ಕಾಮಗಾರಿಗಳನ್ನಾದರೂ ಈ ವರ್ಷದಲ್ಲಿ ಮುಗಿಸುವುದಕ್ಕೆ ಸರ್ಕಾರದವರಲ್ಲಿ ಸಾಕಷ್ಟು ಹಣವಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಆ ಸಾಲಿನಲ್ಲಿ ನಾವು 75 ಸಾವಿರ ರೂಪಾಯಿಗಳ ಅಂದಾಜುಗಳನ್ನು ಮಂಜೂರು ಮಾಡಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ನಾನು ಕೇಳಿರತಕ್ಕದ್ದು ನೇರವಾದ ಪ್ರಶ್ನೆ. ಆ ಕೆಲಸಗಳನ್ನು ಈ ವರ್ಷವೇ ಮುಗಿಸಲು ಸರ್ಕಾರದಲ್ಲಿ ಹಣವಿದೆಯೇ ಎಂಬುದಕ್ಕೆ ನೇರವಾದ ಉತ್ತರ ಬೇಕು ?

ಶ್ರೀ ಆಲೂರು ಹನುಮಂತಪ್ಪ.—ಈ ಕೆರೆಗಳ ರಿಪೇರ್ಸ್, ಬಂಡಿಂಗ್, ರೆಸ್ಟೋರೇಷನ್, ಹೊಸ ಕೆಲಸಗಳನ್ನು ನಡೆಸುವುದು ಇತ್ಯಾದಿ ಬಾಬುಗಳಿಗೆಲ್ಲಾ ಈ ವರ್ಷ 4 ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿ ಖರ್ಚು ಮಾಡಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಸರ್ಕಾರದಲ್ಲಿ ಈ 20 ಕಾಂಗಾರಿಗಳನ್ನು ಮುಗಿಸಲು ಹಣ ಇದೆಯೇ ಇಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಮಾರ್ಚಿಯ ಅಖೈರುವರೆಗೆ ಎಷ್ಟು ಹಣವಿದೆಯೋ ಅಷ್ಟು ಕೆಲಸವನ್ನು ಮಾರ್ಚಿ ಅಖೈರಿನೊಳಗೆ ಮುಗಿಸುತ್ತೇವೆ, ಉಳಿದುದನ್ನು ಮುಂದಿನ ವರ್ಷ ಮುಗಿಸುತ್ತೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಹೀಗೆ ದುಡ್ಡನ್ನು ಖರ್ಚುಮಾಡಿ ತಯಾರಿಸಿದ ಅಂದಾಜುಗಳನ್ನು ನೂಪರಿಂಟೆಂಡಿಂಗ್ ಇಂಜಿನಿಯರ ಆಫೀಸಿನಲ್ಲಿ ಕನವ ಬುಟ್ಟಿಗೆಸೆಯುತ್ತಿರುವುದರಿಂದ ಹೀಗೆ ಇಲ್ಲಿಯವರೆಗೆ ಎಷ್ಟು ಹಣ ವೇಸ್ಟಾಗಿವೆ ಎಂಬುದನ್ನು ತಿಳಿಸುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಹಾಗೆ ಯಾರೂ ದುಡ್ಡನ್ನು ಖರ್ಚುಮಾಡಿ ಮಾಡಿಸಿದ ಅಂದಾಜುಗಳನ್ನು ಕನವ ಬುಟ್ಟಿಗೆ ಹಾಕುವುದಿಲ್ಲ. ಅವುಗಳನ್ನು ಸುರಕ್ಷಿತವಾಗಿ ಇಡಲಾಗುವುದು, ಹಾಗೆ ತಯಾರಿಸಿದ ಅಂದಾಜುಗಳ ಬಗ್ಗೆ 61 ಸಾವಿರ ರೂಪಾಯಿಗಳ ಸ್ಪಿರ್ಲೋವರ ಕೆಲಸಗಳನ್ನು ಮುಗಿಸಿದ್ದೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಹಾಗಾದರೆ ಇಲ್ಲಿಯವರೆಗೂ ಎಷ್ಟು ಲಕ್ಷ ರೂಗಳ ಅಂದಾಜನ್ನು ಮಂಜೂರು ಮಾಡಲಾಗಿದೆ ?

ಶ್ರೀ ಆಲೂರು ಹನುಮಂತಪ್ಪ.—ಅದಕ್ಕೆ ಅಲಾಯಿದ ಪ್ರಶ್ನೆಯನ್ನು ಕಳುಹಿಸಿ. ಉತ್ತರವನ್ನು ಒದಗಿಸಲಾಗುವುದು.

ಶ್ರೀ ಕೆ. ಲಕ್ಕಪ್ಪ.—ಸಣ್ಣ ನೀರಾವರಿ ಕಾಮಗಾರಿಗಳ ಬಗ್ಗೆ ಕೇಂದ್ರ ಸರ್ಕಾರದವರು ನಮ್ಮ ರಾಜ್ಯ ಸರ್ಕಾರದವರಿಗೆ ಒಂದು ಟೆಲಿಗ್ರಾಮನ್ನು ಕಳುಹಿಸಿ ನೀವು ಬನ್ನಿ ದುಡ್ಡನ್ನು ಕೊಡುತ್ತೇವೆಂದು ಹೇಳಿದ್ದರಲ್ಲಾ ಅದೇನಾಯಿತು ?

ಶ್ರೀ ಆಲೂರು ಹನುಮಂತಪ್ಪ.—ಅವರು ನಮಗೆ 3 ಕೋಟಿ 75 ಲಕ್ಷ ರೂಪಾಯಿಗಳನ್ನು ಕೊಟ್ಟರು.

ಅಧ್ಯಕ್ಷರು .—ನಂ. 509ನೆಯ ಪ್ರಶ್ನೆಯನ್ನು ನಾನು ಕೇಳುತ್ತೇನೆ.

Supply of Electric Pumpsets to Mudanur Village

*Q.—509. Sri MAHANTHASWAMY (Shahapur).—

Will the Government be pleased to state :—

whether there is any proposal to supply Electric pumpsets to Mudanur Village in Gulbarga District for the improvement of coconut and betelnut gardens and if so, when the supply would be made ?